ಆ) ಪಶು ಚಿಕಿತಾಲಯಕೆ ಬೇಕಾಗುವ ಸಿಬ್ಬಂದಿಗಳ ವಿವರ ಈ ಕೆಳಗಿನಂತಿದೆ.

1	–	ಪಶುವೈದ್ಯಾಧಿಕಾರಿ
1	–	ಪಶುವೈದ್ಯಕೀಯ ಪರೀಕ್ಷಕರು
1	–	ಪಶುವೈದ್ಯಕೀಯ ಸಹಾಯಕರು
2	–	ಡಿ ದರ್ಜೆ ನೌಕರರು

ಇ) ಬೀದರ್ ಜಿಲ್ಲೆಯಲ್ಲಿ ಈಗಾಗಲೇ ಹತ್ತು ಪಶುವೈದ್ಯಾಧಿಕಾರಿಗಳು ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುತ್ತಾರೆ. ಅವರಲ್ಲಿ ಮೂರು ಜನ ಔರಾದ್ ತಾಲ್ಲೂಕಿನಲ್ಲಿ ಕೆಲಸ ನಿರ್ವಹಿಸುತ್ತಿರುತ್ತಾರೆ. ರಾಜ್ಯಾದ್ಯಂತ 250 ಪಶುವೈದ್ಯಾಧಿಕಾರಿಗಳ ಖಾಲಿ ಹುದ್ದೆಗಳನ್ನು ತುಂಬಲು ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಿದೆ.

ಬೀದರ್ ಜಿಲ್ಲೆಯ ವಸತಿ ನಿಲಯಗಳ ಕಟ್ಟಡಗಳು

4165 (4908) : ಶ್ರೀ ಗುಂಡಪ್ಪವಕೀಲ್ (ಔರಾದ್) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನ 1. ಮುಧೋಳ (ಬಿ) 2. ಡಾಬಕಾ ಗ್ರಾಮಗಳಲ್ಲಿ ಸರ್ಕಾರಿ ವಸತಿ ನಿಲಯಗಳಿದ್ದು ಕಟ್ಟಡವಿಲ್ಲದೇ ಖಾಸಗಿ ಮನೆಗಳಲ್ಲಿ ನಿಲಯಗಳು ನಡೆಸುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸದರಿ ವಸತಿ ನಿಲಯಗಳ ನಿರ್ಮಾಣ ಕಾರ್ಯ ಕೈಗೊಳ್ಳಲು ಸರ್ಕಾರದ ಉದ್ದೇಶವಿದೆಯೇ?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಸಮಾಜ ಕಲ್ಯಾಣ ಇಲಾಖೆ – ಹೌದು

ಡಾಬಕಾದ ವಿದ್ಯಾರ್ಥಿನಿಲಯ ಖಾಸಗಿ ಕಟ್ಟಡದಲ್ಲಿ ನಡೆಸಲಾಗುತ್ತಿದೆ. ಮುಧೋಳ (ಬಿ) ವಿದ್ಯಾರ್ಥಿನಿಲಯವು ವಿದ್ಯಾರ್ಥಿನಿಯರು ದೊರೆಯದ ಕಾರಣ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಿರುವುದಿಲ್ಲ. ಮುಧೋಳದಲ್ಲಿರುವ ವಿದ್ಯಾರ್ಥಿನಿಲಯವನ್ನು ಔರಾದ್‌ಗೆ ವರ್ಗಾಯಿಸುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಪರಿಶಿಷ್ಟ ವರ್ಗಗಳ ಇಲಾಖೆ	–	ಇಲ್ಲ
ಹಿಂದುಳಿದ ವರ್ಗಗಳ ಇಲಾಖೆ	–	ಇಲ್ಲ
ಆ) ಸಮಾಜ ಕಲ್ಯಾಣ ಇಲಾಖೆ	–	ಸರ್ಕಾರದ ಪರಿಶೀಲನೆಯಲ್ಲಿದೆ
ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ	–	ಉದ್ಭವಿಸುವುದಿಲ್ಲ
ಹಿಂದುಳಿದ ವರ್ಗಗಳ ಇಲಾಖೆ	–	ಉದ್ಭವಿಸುವುದಿಲ್ಲ

ಯಳಂದೂರು ತಾಲ್ಲೂಕಿನಲ್ಲಿ ಗಣಿಗಾರಿಕೆ ನಡೆಸುತ್ತಿರುವುದರಿಂದ ಆಗುತ್ತಿರುವ ತೊಂದರೆಗಳ ಬಗ್ಗೆ

4167 (4793) : ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) ಮತ್ತು ಶ್ರೀ ಜಿ. ನಂಜುಂಡಸ್ವಾಮಿ (ಕೊಳ್ಳೇಗಾಲ) ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಯಳಂಗೂರು ತಾಲ್ಲೂಕು ಗುಂಬಳ್ಳಿ ಗ್ರಾಮದಲ್ಲಿ ಸರ್ವೆ ನಂ. 640, 641 ಮತ್ತು 642 ಜಮೀನಿನಲ್ಲಿ ಗಣಿಗಾರಿಕೆ ನಡೆಯುತ್ತಿದ್ದು, ಸಿಡಿಮದ್ದು ಸಿಡಿಸುತ್ತಿರುವುದರಿಂದ ಪಕ್ಕದಲ್ಲಿರುವ ಸಾರ್ವಜನಿಕ ಗುಂಬಳ್ಳಿ, ವೈ.ಕೆ. ಮೊಸಿಳ ಅಂಬಳೆಯಲ್ಲಿ ಪ್ರಧಾನ ಮಂತ್ರಿ ರಸ್ತೆ ಹಾಳಾಗಿದ್ದು, ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಬಂದಿದ್ದರೆ, ಇದನ್ನು ತಡೆಯಲು ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು)

ಅ) ಬಂದಿದೆ.

ಆ) ಈಗಾಗಲೇ ಗಣಿ ಕಾರ್ಯವನ್ನು ಸ್ಥಗಿತಗೊಳಿಸಲಾಗಿದೆ.

ಉಡುಪಿ ಜಿಲ್ಲೆಯಲ್ಲಿ ಮತ್ಸ್ಯ ಆಶ್ರಯ ಯೋಜನೆಯ ಮಂಜೂರಾತಿ ಬಗ್ಗೆ

4168 (4768) : ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) ಮಾನ್ಯ ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮತ್ಸ್ಯ ಆಶ್ರಯ ಯೋಜನೆ ಯಾವ ವರ್ಷದಿಂದ ಪ್ರಾರಂಭಿಸಲಾಯಿತು?

ಆ) ಯೋಜನೆ ಪ್ರಾರಂಭವಾದ ವರ್ಷದಿಂದ ಉಡುಪಿ ಜಿಲ್ಲೆಯಲ್ಲಿ ಮನೆ ಮಂಜೂರಾತಿ ಕೋರಿ ಬಂದ ಅರ್ಜಿಗಳೆಷ್ಟು? (ವರ್ಷವಾರು ವಿವರವನ್ನು ವಿಧಾನ ಸಭಾ ಕ್ಷೇತ್ರವಾರು ನೀಡುವುದು);

ಇ) ಅದರಲ್ಲಿ ಎಷ್ಟು ಜನರಿಗೆ ಮನೆ ಮಂಜೂರಾತಿ ನೀಡಲಾಗಿದೆ ಮತ್ತು ಎಷ್ಟು ಮನೆಗಳು ಪೂರ್ಣವಾಗಿವೆ; ಪೂರ್ಣವಾದ ಮನೆಗಳಿಗೆ ಅನುದಾನ ಹಣ ಪಾವತಿಸಲಾಗಿದೆಯೇ? (ಉಡುಪಿ ಜಿಲ್ಲೆಗೆ ಸಂಬಂಧಿಸಿದಂತೆ ವಿಧಾನ ಸಭಾವಾರು ವಿವರ ಒದಗಿಸುವುದು);

ಈ) ಪ್ರಸಕ್ತ ಮಂಜೂರಾದ ಮನೆಗಳಿಗೆ ಯಾವ ವರ್ಷದಿಂದ ಎಷ್ಟು ಮನೆಗಳಿಗೆ ಉಡುಪಿ ಜಿಲ್ಲೆಯಲ್ಲಿ ಅನುದಾನ ಬಿಡುಗಡೆಗೆ ಬಾಕಿ ಇದೆ? ಅನುದಾನ ಬಿಡುಗಡೆ ಮಾಡದೇ ಇರಲು ಕಾರಣವೇನು?

ಉ) ಮನೆ ಮಂಜೂರಾತಿ ಕೋರಿ ಬಂದ ಎಷ್ಟು ಅರ್ಜಿಗಳು ಮಂಜೂರಾತಿಗೆ ಬಾಕಿ ಇದೆ; ಬಾಕಿ ಇರುವ ಅರ್ಜಿದಾರರಿಗೆ ಯಾವಾಗ ಮನೆ ಮಂಜೂರು ಮಾಡಲಾಗುವುದು?

ಊ) ಮನೆ ಮಂಜೂರಾತಿ ಕೋರಿ ಅರ್ಜಿ ಸಲ್ಲಿಸಿದ ಅರ್ಜಿದಾರರು ಬೇರೆ ಮೂಲಗಳಿಂದ ಹಣ ಒದಗಿಸಿಕೊಂಡು ಮನೆ ಕಟ್ಟಿಕೊಂಡಲ್ಲಿ ಮನೆ ಮಂಜೂರಾದ ನಂತರ ಅವರಿಗೆ ಅನುದಾನ ಬಿಡುಗಡೆ ಮಾಡಲಾಗುವುದೇ?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು)

ಅ) 1998-99ನೇ ಸಾಲಿನಿಂದ ಮತ್ಸ್ಯಾಶ್ರಯ ಯೋಜನೆಯನ್ನು ಪ್ರಾರಂಭಿಸಲಾಯಿತು.

ಆ) ಯೋಜನೆ ಪ್ರಾರಂಭವಾದ ವರ್ಷದಿಂದ ಉಡುಪಿ ಜಿಲ್ಲೆಯಲ್ಲಿ ಮನೆ ಮಂಜೂರಾತಿ ಕೋರಿ 3350 ಅರ್ಜಿಗಳು ಬಂದಿರುತ್ತವೆ. (ವರ್ಷವಾರು ಹಾಗೂ ವಿಧಾನ ಸಭೆ ಕ್ಷೇತ್ರವಾರು ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.)

ಇ) 1510 ಮನೆಗಳಿಗೆ ಮಂಜೂರಾತಿ ನೀಡಲಾಗಿದೆ ಮತ್ತು 932 ಮನೆಗಳು ಪೂರ್ಣಗೊಂಡಿವೆ. ಪೂರ್ಣವಾದ ಮನೆಗಳಿಗೆ ಪೂರ್ಣ ಹಣವನ್ನು ಸಂಬಂಧಪಟ್ಟ ಅನುಷ್ಠಾನ ಸಂಸ್ಥೆಗಳಿಗೆ ಈಗಾಗಲೇ